<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 633/2015 ಸಿಡಬ್ಲೂ: 5 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 06-12-2024

ಹೆಸರು : ಪರಮೇಶ್

ತಂದೆ ಹೆಸರು : ಭೀಮಸೇನ್

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನ್ನ ತಮ್ಮ. ಚಾ ಸಾ 4 ನನ್ನತಮ್ಮನ ಸೂಸೆ . ಚಾ ಸಾ 6 ನನ್ನ ಹೆಂಡತಿ. ಆರೋಪಿತರು ನನಗೆ ಪರಿಚಯ. ಚಾ ಸಾ 7 ನನಗೆ ಪರಿಚಯ. ಆರೋಪಿತನು ನನಗೆ ಪರಿಚಯ. ಚಾ ಸಾ 1 ಮತ್ತು ಆರೋಪಿತರ ನಡುವೆ 9 ವರ್ಷಗಳ ಹಿಂದೆ ರಾತ್ರಿ 10-30 ಗಂಟೆಗೆ ಜಗಳ ಆಗಿರುತ್ತದೆ. ಸದರಿ ಜಗಳ ಆಗುವ ಸಮಯದಲ್ಲಿ ಆರೋಪಿತನು ನನ್ನ ತಮ್ಮನಾದ ಚಾ ಸಾ 1 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾನೆ. ಆರೋಪಿತನು ಕಲ್ಲಿನಿಂದ ಹೊಡೆದಿದ್ದರಿಂದ ಚಾ ಸಾ 1 ರವರ ತಲೆಗೆ ಹಾಗೂ ಹಣೆಗೆ ರಕ್ತಗಾಯ ಆಗಿತ್ತು. ಸದರಿ ಜಾಗಳ ಬಿಡಿಸಲು ಬಂದಾಗ ಚಾ ಸಾ 1 ರವರು ನೆಲದ ಮೇಲೆ ಬಿದಿದ್ದು ಆತನಿಗೆ ಬಹಳ ರಕ್ತಗಾಯ ಆಗಿದ್ದು. ಆಗ ನಾನು ಆತನಿಗೆ ಆಂಬ್ಯುಲೆನ್ಸ ಮುಂಖಾಂತರ ಸರ್ಕಾರಿ ಆಸ್ಪತ್ರೆ ಸೇಡಂಗೆ ಸೇರಿಕೆ ಮಾಡಿ ಪ್ರಾಥಮಿಕ ಚಿಕಿತ್ಸೆ ನೀಡಿಸಿ ಮುಂದಿನ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕಲಬುರಗಿಗೆ ಕರೆದುಕೊಂಡು ಹೋಗಿರುತ್ತೇನೆ. ಜಗಳ ಮುಗಿದ ನಂತರ ಆರೋಪಿತನು ಚಾ ಸಾ 1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾನೆ. ಸಾಕ್ಷಿಗೆ ಮು ಮಾ -1 ತೋರಿಸಲಾಗಿ ಸಾಕ್ಷಿಯು ಇದೇ ಕಲ್ಲಿನಿಂದ ಆರೋಪಿತನು ಚಾ ಸಾ 1 ರವರಿಗೆ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಎಂ ಎಚ್ ವಕೀಲರಿಂದ ಃ

ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಓದಲು ಹಾಗೂ ಬರೆಯಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಗಳ ಆಗುವ ಸಮಯದಲ್ಲಿ

ನಾನು 250 ಮೀಟರ್ ಅಂತರದಲ್ಲಿದ್ದೆ. ನಾನು ಅಲ್ಲಿಗೆ ಬರುವುದಕ್ಕಿಂತ ಮೊದಲು ಚಾ ಸಾ 1 ಹಾಗೂ ಆರೋಪಿತರು ಒಂದೇ ಕೋಣೆಯಲ್ಲಿ ಇದ್ದರು. ನಾನು ಉಂಗುರ ಮಾರಲು ಬೇರೆ ಬೇರೆ ಊರಿಗೆ ಹೋಗುತ್ತೇನೆ, ಆದರೆ ನನ್ನ ಕೆಲಕ್ಕೆ ಹೋಗಲು ಯಾವುದೇ ಟೈಮ್ ಟೇಬಲ್ ಇಲ್ಲ ನಾನು ಯಾವಾಗ ಬೇಕಾದರೆ ಅವಾಗ ಹೋಗುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತನು ನನ್ನ ಖಾಸಾ ಅಕ್ಕನ ಮಗ. ನಾನು ಚಾ ಸಾ 1 ರವರಿಗೆ ನೋಡಿದಾಗ ಆತನು ರಕ್ತ ಗಾಯ ಆಗಿ ನೆಲಕ್ಕೆ ಬಿದ್ದಿದ್ದನು. ನಾನು ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿರುವುದನ್ನು ನೋಡಿಲ್ಲ. ಮು ಮಾ -1 ಕಲ್ಲು ಯಾವರತರಹದ ಕಲ್ಲು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಚಾ ಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತನು ಚೆನ್ನಾಗಿರುವುದರಿಂದ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**